
# ಆರಿಸಲಾಗದ ಜ್ಯೋತಿ

## ಜಸ್ಟಿನ ಚಹಾಯ

ನಿನ್ನೆಂದಿಗೂ ಪಳೆಯುಳಿಕೆಯಾಗಿರಲಿಲ್ಲ
ಬೇಲಿ ಗೀಚುವ ಮುನ್ನ
ನೀನು ಸಮುದ್ರ
ಎಲೆಗಳುದುರುವ ಮುನ್ನ
ನೀನು ಅತ್ತಿ ಹಣ್ಣು
ಗಡಿಗಳುದಿಸುವ ಮುನ್ನ
ಉರಿಪಾದದಲ್ಲಿ ನಡೆದ ಪ್ರಾರ್ಥನೆ...



ಬರೆಯಲಾರೆ ನೀನು ಬಲಿಯ ಕುರಿಯೆಂದು
ನೀನು ಬೆಳಗುವ ಸೂರ್ಯ
ನೀನು ಪೊರೆವ ತಾಯಿ
ಅಳಿಸಲಾಗದ ಹೆಸರು...

ಲೋಕಕೆ ನಿನ್ನ ಮೊಲ್ಲೆಯ
ಗಂಧ ನೆನಪಿಲ್ಲ
ರಾಗದ ಕೂನಿಲ್ಲ
ಸಿಡಿಮದ್ದುಗಳು ಸ್ಮಶಾನ ಮೌನವ ಬಿತ್ತುವ ಮುನ್ನ
ನಿನ್ನ ಹೆಣ್ಣುಮಕ್ಕಳು ಹಾಡಿದ ಲಾಲಿ ಮರೆತೇ
ಹೋಯಿತಲ್ಲ

ನನ್ನ ಕನಸಲ್ಲಿ ಕಂಡಿದ್ದೇನೆ
ಅವರು ನೋವ ನಡುವೆಯೂ ನಗುತ್ತಿದ್ದರು
ಕದ್ದ ಹಣ್ಣಿನಂತೆ ಸಂತೋಷವ ಕಲೆ ಹಾಕುತ್ತಿದ್ದರು
ತೊರೆದುಹೋಗದ ಹಕ್ಕಿಗಳಿಗೆ ಹಾಡ ಕಲಿಸುತ್ತಿದ್ದರು

ಅದೇ ಲೋಕ ನಿನ್ನ ಖತರ್ನಾಕ್ ಎಂದು
ಕರೆದರೂ
ನಾನು ಆರಂಭವೆಂದು ಕರೆಯುತ್ತೇನೆ
ಮರುಹಾದಿ ಎನ್ನುತ್ತೇನೆ
ಆರಿಸಲಾಗದ ಜ್ಯೋತಿಯೆನ್ನುತ್ತೇನೆ

ನೀನು ಕಾಯುತ್ತಿಲ್ಲ
ನೆನಪ ಕುಲುಮೆಯಲ್ಲಿ ಹೊಳೆಯುತ್ತಿರುವೆ
ನೀನು ಮರಳಿ ದನಿಗೊಡುವ
ನೆಲದ ಹಾಡು
ಮತ್ತೆ ನಾನು???
ಬರಿಯ ಸಾಕ್ಷಿ
ಅದರ ಕಯ್ಯಲ್ಲಿ ಶಾಯಿ
ಗಟ್ಟಿಯಾಗಿ ಹೇಳುತ್ತೇನೆ
ನೀನು ಬೂದಿಯಲ್ಲ
ಕತ್ತಲೆ ಗೆದಿಯದ ಬೂದಿ ಮುಚ್ಚಿದ ಕೆಂಡ....!